High Court of Karnataka in 1961; Will the Government issue directions to the KHB to implement their Order dated 21/24-9-79 for the welfare of the weaker sections of the society? The Hon'ble Chief Minister has also issued directions to the concerned to dispose the 46 houses to the present occupants.

ಶ್ರೀ ಡಿ.ಎ. ಚಿನ್ನಪ್ಪ (ಗಣಿ ಹಾಗೂ ಭೂಗರ್ಭ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಸತಿ ಸಚಿವರ ಪರವಾಗಿ ನಾನು ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

1857ರಲ್ಲಿ ಕರ್ನಾಟಕ ಗೃಹ ಮಂಡಳಿಯು ಚನ್ನಪಟ್ಟಣದಲ್ಲಿ 46 ಮನೆಗಳನ್ನು ಸುಮಾರು 2 ಎಕರೆ 25 ಗುಂಟೆ ಸರ್ಕಾರಿ ಸ್ಪನ್ ಸಿಲ್ಕ್ ಮಿಲ್ಲ ಜಮೀನಿನಲ್ಲಿ ಕಾರ್ಮಿಕರಿಗಾಗಿ ಬಾಡಿಗೆ ಆಧಾರದ ಮೇಲೆ ನಿರ್ಮಿಸಿ ಮಿಲ್ಲಿಗೆ ವಹಿಸಿಕೊಡಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಹೀಗೆ ನಿರ್ಮಿಸಲಾದ ಮನೆಗಳನ್ನು ಅರ್ಹ ಹಂಚಿಕೆ ಬಾಡಿಗೆದಾರರಿಗೆ ಕೆಲವು ಷರತ್ತುಗಳೊಂದಿಗೆ ಹಂಚಿಕೆ ಮಾಡಲು ರಾಜ್ಯ ಸರ್ಕಾರವು ಆಜ್ಞೆ ಮಾಡಿ ಸಂಖ್ಯೆ:ಹೆಚ್.ಯುಡಿ. ಎಸಐಹೆಚ್ಎಸ್. 78, ದಿನಾಂಕ 21:24-9-79ರಲ್ಲಿ ಮಂಡಳಿಗೆ ಅನುಮತಿ ನೀಡಿದೆ. ಸದರಿ ಆಜ್ಞೆಯಲ್ಲಿ ಚನ್ನಪಟ್ಟಣದ 46 ಮನೆಗಳೂ ಸೇರಿದೆ.

ಈ ಮಧ್ಯೆ ಮನೆಗಳ ಬಾಡಿಗೆ ಬಾಕಿಯನ್ನು ಸಂದಾಯ ಮಾಡಲು ತಿಳಿಸಿದಾಗ, ಕರ್ನಾಟಕ ರೇಷ್ಮೆ ಉದ್ಯಮದ ಜನರಲ್ ಮ್ಯಾನೇಜರ್ರವರು ಸರ್ಕಾರಿ ಸ್ಪನ್ ಸಿಲ್ಕ್ ಮಿಲ್ಲಿನ ಎಲ್ಲಾ ಆಸ್ತಿ ಹಾಗೂ ಮನೆಗಳನ್ನು ಕರ್ನಾಟಕ ರೇಷ್ಮೆ ಉದ್ಯಮ ನಿಗಮವು 1-9-81ರಿಂದ ವಹಿಸಿಕೊಂಡಿರುವುದೆಂದು ಹಾಗೂ ಮನೆ ಬಾಡಿಗೆ ಬಾಕಿಯನ್ನು ಸಂದಾಯ ಮಾಡಲಾಗುವುದಿಲ್ಲವೆಂದು ತಿಳಿಸಿದ್ದಾರೆ.

ಬಾಡಿಗೆ ಬಾಕಿಯನ್ನು ಸಂದಾಯ ಮಾಡಬೇಕೆಂದು ರೇಷ್ಮೆ ಉದ್ಯಮವನ್ನು ಹಲವಾರು ಬಾರಿ ವಿನಂತಿಸಲಾಗಿದೆ. ಆದರೂ ಹಣ ಸಂದಾಯವಾಗಿಲ್ಲ.

ಈ ಮನೆಗಳಲ್ಲಿ ವಾಸವಾಗಿರುವ ಬಾಡಿಗೆದಾರರು, 1979ರ ಸರ್ಕಾರಿ ಆಜ್ಞೆಯ ಪ್ರಕಾರ ಮನೆಗಳನ್ನು ತಮಗೆ ಹಂಚಿಕೆ ಮಾಡಿಕೊಡಬೇಕೆಂದು ಕೋರುತ್ತಿದ್ದಾರೆ.

ಆದರೆ ಈ ಮನೆಗಳನ್ನು ಅಂದಿನ ಸರ್ಕಾರಿ ಸ್ಪನ್ ಮಿಲ್ಲ ಭೂಮಿಯಲ್ಲಿ ನಿರ್ಮಿಸಲಾಗಿದೆ. ಸದರಿ ಭೂಮಿಯು ಈಗ ಕರ್ನಾಟಕ ರೇಷ್ಮೆ ಉದ್ಯಮದ ಒಡೆತನದಲ್ಲಿದೆ. ಆದ್ದರಿಂದ ಮನೆಗಳನ್ನು ಬಾಡಿಗೆದಾರರಿಗೆ ಹಂಚಲು ರೇಷ್ಮೆ ಉದ್ಯಮದ ಅನುಮತಿ ಅವಶ್ಯವಿದೆ. ಇದಲ್ಲದೆ ಬಾಡಿಗೆ ಬಾಕಿ ಸುಮಾರು 1.55 ಲಕ್ಷ ರೂಪಾಯಿಗಳನ್ನು ಸಹ ಉದ್ಯಮದಿಂದ ಅಥವಾ ಬಾಡಿಗೆದಾರರಿಂದ ವಸೂಲು ಮಾಡಬೇಕಾಗಿದೆ.

ಮನೆಗಳನ್ನು ಬಾಡಿಗೆದಾರರಿಗೆ ಹಂಚಿಕೆ ಮಾಡಲು ರೇಷ್ಮೆ ಉದ್ಯಮ ನಿಯಮಿತದವರಿಂದ ಅನುಮತಿ ಪಡೆಯಲು ಪ್ರಯತ್ನ ಮಾಡಲಾಗುತ್ತಿದೆ.

ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರದವರು ಗೋವಿನ ಜೋಳವನ್ನು ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಖರೀದಿ ಮಾಡಿದ್ದು ಇದುವರೆಗೂ ರೈತರಿಗೆ ಹಣ ಪಾವತಿ ಮಾಡದಿರುವುದರ ಬಗ್ಗೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ಸರ್ಕಾರದವರು ಗೋವಿನ ಜೋಳವನ್ನು ಮಾರ್ಕೆಟಿಂಗ್

ಫೆಡರೇಷನ್ ಮುಖಾಂತರ ಖರೀದಿ ಮಾಡಿದ್ದು, ಇನ್ನೂವರೆಗೂ ರೈತರಿಗೆ ಹಣ ಕೊಡದೇ ಇರುವ ಬಗ್ಗೆ ಸರ್ಕಾರದವರು ಮಾರ್ಕೆಟಿಂಗ್ ಫೆಡರೇಷನ್ ಮುಖಾಂತರ ಗೋವಿನ ಜೋಳವನ್ನು ಬೆಳಗಾಂ ಜಿಲ್ಲೆಯಲ್ಲಿ ಖರೀದಿ ಮಾಡಿರುತ್ತಾರೆ. ಆದರೆ ಎರಡು ತಿಂಗಳಾದರೂ ಸಹ ಇನ್ನೂವರೆಗೂ ರೈತರಿಗೆ ಖರೀದಿ ಮಾಡಿದ ಹಣವನ್ನು ಕೊಟ್ಟಿರುವುದಿಲ್ಲ. ತತ್ಸಂಬಂಧವಾಗಿ ಮಾರ್ಕೆಟಿಂಗ್ ಸೊಸೈಟಿಯವರನ್ನು ಕೇಳಿದಾಗ ಇನ್ನೂವರೆಗೂ ಸರ್ಕಾರದಿಂದ ಹಣ ಬಂದಿರುವುದಿಲ್ಲ. ಹಣ ಬಂದನಂತರ ಕೊಡುಲಾಗುವುದೆಂದು ಹೇಳಲಿಕ್ಕೆ ಹತ್ತಿರುತ್ತಾರೆ. ಹೀಗಾಗಿ ರೈತರಿಗೆ ತುಂಬಾ ತೊಂದರೆಯಾಗಲಿಕ್ಕೆ ಹತ್ತಿರುತ್ತದೆ. ಬೈಲಹೊಂಗಲ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯವರು ಇನ್ನೂ 25 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ.

ಆದಕಾರಣ, ಕೂಡಲೇ ರೈತರ ಕಡೆಯಿಂದ ಖರೀದಿ ಮಾಡಿದ ಹಣವನ್ನು ಕೊಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಅನುಮತಿ ಕೋರಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಒರಟು ಧಾನ್ಯ ಮತ್ತು ಬತ್ತವನ್ನು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಖರೀದಿಸಲು ಭಾರತ ಸರ್ಕಾರದವರು, ಭಾರತ ಆಹಾರ ನಿಗಮಕ್ಕೆ ವಹಿಸಿಕೊಟ್ಟಿರುತ್ತಾರೆ. ರಾಜ್ಯ ಸರ್ಕಾರದಿಂದ ಭಾರತ ಆಹಾರ ನಿಗಮದ ಪರವಾಗಿ ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಹಾಮಂಡಳಿ ಮತ್ತು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಇವರನ್ನು ಸಬ್-ಏಜೆಂಟ್ಗಳಾಗಿ ನೇಮಿಸಲಾಗಿದೆ.

ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಹಾ ಮಂಡಳಿಗೆ ಬೆಳಗಾಂ ಜಿಲ್ಲೆಯ ಕಾರ್ಯಾಚರಣೆಯನ್ನು ವಹಿಸಿಕೊಡಲಾಗಿದೆ.

ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಹಾಮಂಡಳಿ ಮುಖಾಂತರ ದಿನಾಂಕ 3-2-1994ರವರೆಗೆ ಬೆಳಗಾಂ ಜಿಲ್ಲೆಯಲ್ಲಿ ಒಟ್ಟು 3352.1 ಮೆಟ್ರಿಕ್ ಟನ್ ಗೋವಿನ ಜೋಳವನ್ನು ಖರೀದಿಸಿದ್ದು, ಅದರ ಬೆಲೆ 93.53 ಲಕ್ಷ ರೂಪಾಯಿಗಳು. ಇದರಲ್ಲಿ 60 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದು ಬೆಳಗಾಂ ಜಿಲ್ಲಾ ರೈತರಿಗೆ ಕೊಡಲಾಗಿದೆ. ಈ ಜಿಲ್ಲೆಗೆ ಇನ್ನೂ 30 ಲಕ್ಷ ರೂ.ಗಳನ್ನು ಕೊಡಬೇಕಾಗಿದೆ. ಈ ಪೈಕಿ ಬೈಲಹೊಂಗಲ ತಾಲ್ಲೂಕಿನಲ್ಲಿ 1450 ಮೆಟ್ರಿಕ್ ಟನ್ ಗೋವಿನ ಜೋಳ ಖರೀದಿಸಿದ್ದು ಅದರ ಬೆಲೆ 41.32 ಲಕ್ಷ ಇರುತ್ತದೆ. ಈ ಬಾಬ್ತು 30 ಲಕ್ಷ ರೂಪಾಯಿಗಳನ್ನು ಈಗಾಗಲೇ ರೈತರಿಗೆ ಕೊಡಲಾಗಿದೆ. ಬಾಕಿಯಾದ 11.32 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ.

ಮಾರುಕಟ್ಟೆ ಮಹಾ ಮಂಡಳಿಯವರು ಈವರೆಗೆ ಬೆಳಗಾಂ, ಧಾರವಾಡ, ಬಿಜಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸುಮಾರು 3.42 ಕೋಟಿ ರೂಪಾಯಿ ಮೌಲ್ಯದ ಗೋವಿನ ಜೋಳವನ್ನು ಖರೀದಿಸಿರುತ್ತಾರೆ. ಈ ಪೈಕಿ ಮಂಡಳಿಗೆ ರೂ. 1.60 ಕೋಟಿ ರೂ.ಗಳನ್ನು ಭಾರತ ಆಹಾರ ನಿಗಮದಿಂದ ಪಡೆದು ಕೊಡಲಾಗಿದೆ. ಇದಲ್ಲದೆ ಈ ದಿನ ರೂಪಾಯಿ 15 ಲಕ್ಷವನ್ನು ಸದ್ರಿ ಮಹಾಮಂಡಲಕ್ಕೆ ಬಿಡುಗಡೆ ಮಾಡಲಾಗಿದೆ.

ಇಲ್ಲಿಯವರೆಗೆ ಭಾರತ ಆಹಾರ ನಿಗಮದವರು 2.95 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ಈ ಹಣವನ್ನು ಮಾರುಕಟ್ಟೆ ಮಂಡಳಿಗೆ 1.75 ಕೋಟಿಗಳನ್ನು ಮತ್ತು ಕರ್ನಾಟಕ ಆಹಾರ ಮತ್ತು ನಾಗರೀಕ ಪೂರೈಕೆ ನಿಗಮಕ್ಕೆ 1.20 ಕೋಟಿ ರೂ.ಗಳನ್ನು ಪಾವತಿಸಿ, ಈ ಹಣವನ್ನು ಅವರು ಪೂರ್ತಿಯಾಗಿ ಖರ್ಚು ಮಾಡಿರುತ್ತಾರೆ.

ಪುನಃ 2 ಕೋಟಿ ರೂಪಾಯಿಗಳನ್ನು ರಾಜ್ಯಕ್ಕೆ ಬಿಡುಗಡೆ ಮಾಡಲು ಭಾರತ ಆಹಾರ ನಿಗಮದವರನ್ನು ಟೆಲೆಕ್ಸ್ ಮೂಲಕ ಒತ್ತಾಯಿಸಲಾಗಿದೆ. ಶೀಘ್ರದಲ್ಲಿಯೇ ಈ ಹಣವನ್ನು ಪಡೆದು ಎಲ್ಲ ಬಾಕಿಯನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣೆ ಪ್ರಸ್ತಾವದ ಮೇಲಿನ ಮುಂದುವರೆದ ಚರ್ಚೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರಾಜ್ಯಪಾಲರು 7ನೇ ಫೆಬ್ರುವರಿ 1994ರಂದು ಈ ಸಭೆಯಲ್ಲಿ ಉದ್ದೇಶಿಸಿ ಮಾಡಿದ ಭಾಷಣಕ್ಕೆ ಕೃತಜ್ಞತಾಪೂರ್ವಕವಾದ ವಂದನಾರ್ಪಣೆಯನ್ನು ಅರ್ಪಿಸಿ ಮಾತನಾಡಿದಂತಹ ಸಂದರ್ಭದಲ್ಲಿ ಆಡಳಿತ ಪಕ್ಷದ ನಮ್ಮ ಶಿವನಂಜಪ್ಪನವರು ಮತ್ತು ಅದನ್ನು ಬೆಂಬಲಿಸಿ ಮಾತನಾಡಿದಂತಹ ಮಾನ್ಯ ಹಲಗೇಗೌಡರು ರಾಜ್ಯಪಾಲರ ಭಾಷಣದಲ್ಲಿ ಏನಾದರೂ ಕೆಲವು ವಿಷಯಗಳನ್ನು ಹುಡುಕಿ ತೆಗೆದು ಮುಂದೆ ಏನು ಮಾಡುವವರಿದ್ದಾರೆ ಎಂಬ ವಿವರಗಳನ್ನು ಒದಗಿಸಬಹುದೆಂದು ನಾವು ನಿರೀಕ್ಷೆ ಮಾಡಿದ್ದೆವು. ಬಹುಶಃ ಇದು ಪೊಳ್ಳು ಭಾಷಣ. ಸಾಮಾನ್ಯವಾಗಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ರಾಜ್ಯಪಾಲರ ಭಾಷಣವೆಂದರೆ ಸರ್ಕಾರದ ಧೋರಣೆ ಆ ಕಾರ್ಯಕ್ರಮಗಳ ಮುನ್ನೋಟ, ಹಿಂದಿನ ವರ್ಷದ ಸಾಧನೆಗಳ ಕ್ರೋಢೀಕರಣದ ಒಂದು ಚಿತ್ರ ಆಗಿರಬೇಕು. ಆದರೆ ಈ ಸರ್ಕಾರದ ಕಾರ್ಯಕ್ರಮಗಳಿಗೆ, ಧೋರಣೆಗಳಿಗೆ ಸಂಬಂಧವೇ ಇಲ್ಲದಂತಹ ಭಾರಿ ಶಬ್ದಗಳ ಜಾಲದ ಪುನರುಕ್ತಿ ಇದಾಗಿದ್ದು ರಾಜ್ಯಪಾಲರ ಭಾಷಣದ ಒಂದು ಪಾವ್ರಿತೆಯನ್ನು ಹಾಗೂ ಅರ್ಥವನ್ನು ಕಳೆದುಕೊಂಡಿದೆಯೆಂದು ಅನಿವಾರ್ಯವಾಗಿ ನಾನು ಹೇಳಬೇಕಾಗಿದೆ. ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಂತಹ ಜನ ಕಲ್ಯಾಣ ವಲಯಗಳಾದ ಶಿಕ್ಷಣವಿರಬಹುದು, ನೀರಾವರಿ ಇರಬಹುದು, ಕೃಷಿ ಇರಬಹುದು, ವಿದ್ಯುಚ್ಛಕ್ತಿ ವಲಯ ಇರಬಹುದು, ಉದ್ಯೋಗವಿರಬಹುದು, ಕಾನೂನು ವ್ಯವಸ್ಥೆಯಿರಬಹುದು. ಆ ಬಗ್ಗೆ ಏನು ಪ್ರಗತಿಯಾಗಿದೆ ಎನ್ನುವುದನ್ನು ಯಾವುದೇ ಒಂದು ವಿವರಣೆಯನ್ನು ತಿಳಿಸದೆ ಒಂದು ರೀತಿಯ ಎಲ್ಲಾ ಕಾರ್ಯಕ್ರಮಗಳು ಸಂಪೂರ್ಣವಾಗಿ ಕುಸಿದು ಹೋಗಿದ್ದು ಯಾವುದೇ ಅಭಿವೃದ್ಧಿಯಾಗದೆ ಇರುವಂತಹ ಯಾವುದೇ ಸಾಧನೆ ಆಗದೇ ಇರುವಂತಹ ಒಂದು ವಿಚಿತ್ರ ಪರಿಸ್ಥಿತಿಗೆ ಇವತ್ತು ಈ ರಾಜ್ಯ ತಲುಪಿದೆ. ಈ ಸರ್ಕಾರ ಆ ದಿಕ್ಕಿನಲ್ಲಿ ನಮ್ಮನ್ನು ತೆಗೆದುಕೊಂಡು ಹೋಗುತ್ತಿದೆ. ಬಹುಶಃ ನಾನು ಹೇಳುತ್ತೇನೆ, ದಿಕ್ಕೆಟ್ಟ ಆದ್ಯತೆಗಳ ಒಂದು ಪರಿಣಾಮದಿಂದ ಯಾವುದಕ್ಕೆ ಆದ್ಯತೆಯನ್ನು ಕೊಡಬೇಕಾಗಿತ್ತೋ ಆ ಕಡೆ ಚಿಂತನೆಯನ್ನು ಮಾಡದೆ ಅದಕ್ಕೆ ಬೇಕಾದ ಹಣವನ್ನು ತೆಗೆದಿದ್ದರೆ ಆ ಹಣವನ್ನು ಬೇರೆ ಬೇರೆ ಆದ್ಯತೆಗಳಿಗೆ ಅನಗತ್ಯವಾಗಿ ಖರ್ಚು ಮಾಡಿದ ಪರಿಣಾಮ ಇವತ್ತು ಯಾವುದೇ ಒಂದು ಅಭಿವೃದ್ಧಿಯನ್ನು ಸಾಧಿಸದೆ ಇರುವಂತಹ ಒಂದು ವಿಚಿತ್ರವಾದ ಪರಿಸ್ಥಿತಿಯಲ್ಲಿ ರಾಜ್ಯಪಾಲರ ಭಾಷಣದ ಬಗ್ಗೆ ನಾವು ಮಾತನಾಡುವಂತಹ ಒಂದು ಪರಿಸ್ಥಿತಿ ಒದಗಿ ಬಂದಿದೆ.

1991ರಲ್ಲಿ ಒಂದು ಸುಭದ್ರವಾದ ಸರ್ಕಾರ ಕೊಡುತ್ತೇವೆಂದು ನಮಗೆ ಓಟು ಕೊಡಿಯೆಂದು ಈ ರಾಜ್ಯದ ಜನರ ಮುಂದೆ ಬಂದಂತಹ ನಮ್ಮ ಕಾಂಗ್ರೆಸ್ ಸ್ನೇಹಿತರು ಅಜೀರ್ಣವಾಗುವಷ್ಟು ಬಹುಮತವನ್ನು ನಾಡಿನ ಜನರು ಕೊಟ್ಟರೂ ಸಹ ನಾಲ್ಕು ಕಾಲು ವರ್ಷಗಳಲ್ಲಿ ಜನತೆಗೆ ಸುಭದ್ರವಾದ ಸರ್ಕಾರವನ್ನು ನೀಡುವ ಬದಲಾಗಿ ವ್ಯಾಪಕವಾಗಿ ಭ್ರಷ್ಟಾಚಾರದಿಂದ ಕೂಡಿದಂತಹ ಒಂದು ಅಸ್ಥಿರವಾದ ಸರ್ಕಾರವನ್ನು ಕೊಟ್ಟಿದ್ದಾರೆ. ಒಂದು ರಾಜಕೀಯ ಅಸ್ಥಿರತೆ, ವ್ಯಾಪಕ ಭ್ರಷ್ಟಾಚಾರ, ಆರ್ಥಿಕ ದಿವಾಳಿತನದಿಂದ ಯಾವುದೇ ಅಭಿವೃದ್ಧಿ ಕೆಲಸಕಾರ್ಯಗಳು ಆಗದೆ ಈ ನಾಡಿನ ನಾಲ್ಕೂವರೆ ಕೋಟಿ ಜನ ಒಂದು ರೀತಿಯ ಗೊಂದಲ ವಾತಾವರಣದಲ್ಲಿ ಸಿಲುಕಿಕೊಂಡು ಅವರ ಬದುಕು ಉಳಿವಿನ ಬಗ್ಗೆ ಚಿಂತನೆ ಮಾಡುವಂತಹ ಒಂದು